**ಪತ್ರಿಕಾ ಪ್ರಕಟಣೆ**

**ವಿಜಯಪುರ**

**ದಿನಾಂಕ: 08.06.2021.**

**1] ತಾಳಿಕೋಟಿ ಪೊಲೀಸ ಠಾಣೆ ಗುನ್ನೆ ನಂ: 102/2021 ಕಲಂ: 279, 337,338, 304(ಎ) ಐ.ಪಿ.ಸಿ. ಮತ್ತು 187 ಎಂ ವ್ಹಿ ಆ್ಯಕ್ಟ್**

ದಿನಾಂಕ 06.06.2021 ರಂದು 18-30 ಗಂಟೆಗೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಮೋಟರ್ ಸೈಕಲ್ ನಂ ಕೆಎ 28 ಎಚ್ಎ 1601 ನೇದ್ದರ ಚಾಲಕ ಹೆಸರು ನಮೂದು ಇರುವುದಿಲ್ಲ ಈತನು ತಾನು ನಡೆಸುತ್ತಿದ್ದ ಮೋಟಾರ್ ಸೈಕಲನ್ನು ಅತೀ ಜೋರಾಗಿ ನಿರ್ಲಕ್ಷತನದಿಂದ ಮಾನವೀಯ ಜೀವಕ್ಕೆ ಅಪಾಯವಾಗು ರೀತಿಯಲ್ಲಿ ನಡೆಸಿಕೊಂಡು ತುಂಬಗಿ ಗ್ರಾಮದ ಬಿ ಎಸ್ ಪಾಟೀಲ ಸಾಸನೂರ ಇವರ ಜಮೀನಿನ ಹತ್ತರ ಬ್ರಿಜ್ ಮೇಲೆ ತನ್ನ ಮೋಟರ್ ಸೈಕಲನ್ನು ನಡೆಸಿಕೊಂಡು ಬಂದು ನನ್ನ ಮೊಮ್ಮಗ ನಡೆಸುತ್ತಿದ್ದ ಮೋಟರ್ ಸೈಕಲ್ ನಂ ಕೆಎ 28 ಇಕ್ಯೂ 6175 ನೇದ್ದಕ್ಕೆ ಹಾಯಿಸಿ ಅಪಘಾತ ಪಡೆಸಿ ತೀವ್ರ ಸ್ವರೂಪದ ಗಾಯಪಡಿಸಿ ಮಲ್ಲಿಕಾರ್ಜುನ ಮಹಾಂತೇಶ ಕಡಕೋಳ ಮೃತನಾಗಿದ್ದು ಇರುತ್ತದೆ. ಗಾಯಾಳುಗಳಿಗೆ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಕೊಡಿಸದೇ ಪೊಲೀಸ್ ಠಾಣೆಗೆ ಯಾವುದೇ ಮಾಹಿತಿಯನ್ನು ತಿಳಿಸದೇ ಓಡಿ ಹೋದ ಅಪರಾಧ. ಈ ಬಗ್ಗೆ ಶರಣಪ್ಪ ತಂ ಬಸಪ್ಪ ಉತಾಳೆ ಸಾ॥ ಕಲಕೇರಿ ತಾ॥ ತಾಳಿಕೋಟಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 07.06.2021 ರಂದು ತಾಳಿಕೋಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಮಹಿಳಾ ಪೊಲೀಸ ಠಾಣೆ ಗುನ್ನಾ. ನಂ: 57/2021 ಕಲಂ: ಮಹಿಳೆ ಮತ್ತು ಮಗು ಕಾಣೆ**

ದಿನಾಂಕ 07.06.2021 ರಂದು 11-00 ಗಂಟೆಗೆ. ಸುಮಾರಿಗೆ ಇದರಲ್ಲಿ ಆರೋಪಿತರಾದ 1) ಸೈಯಿದಾ ಗಂ॥ ಇರ್ಫಾನ ಅಲಾಸ, 2) ಇರಮನಾಜ್ ಇರ್ಫಾನ ಅಲಾಸ್ ಸಾ॥ ಜೆ.ಎಂ ರಸ್ತೆ, ಗಚ್ಚಿನಮಹಲ, ವಿಜಯಪುರ ಇವರು ಪಿರ್ಯಾದಿಯ ಹೆಂಡತಿ ಸೈಯಿದಾ ಗಂ॥ ಇರ್ಫಾನ ಅಲಾಸ,ಇವಳು ದಿನಾಂಕ: 05-06-2021 ರಂದು ರಾತ್ರಿ 01-30 ಗಂಟೆಯಿಂದ ಬೆಳಿಗ್ಗೆ 08-00 ಗಂಟೆಯ ನಡುವಿನ ಅವಧಿಯಲ್ಲಿ ಮಗಳಾದ ಇರಮನಾಜ್ ಇವಳಿಗೆ ಕರೆದುಕೊಂಡು ಮನೆಯಲ್ಲಿ ಯಾರಿಗೂ ಹೇಳದೆ ಕೇಳದೆ ಎಲ್ಲಿಗೋ ಹೋಗಿ ಕಾಣೆಯಾಗಿರುತ್ತಾರೆ. ಕಾಣೆಯಾಗಿರುವ ಸೈಯಿದಾ ಇವರದು ಕೊಲು ಮುಖ, ಗೋದಿಗೆಂಪು ಮೈಬಣ್ಣ, ಮೈಯಿಂದ ಸಾದಾರಣ ಮೈಕಟ್ಟು, ಎತ್ತರ : 5 ಪೂಟ್ 6 ಇಂಚು ಇದ್ದು, ಹಿಂದಿ, ಮರಾಠಿ ಇಂಗ್ಲೀಷ್ ಬಾಷೆ ಮಾತನಾಡುತ್ತಾಳೆ. ಹೋಗುವಾಗ ಯಾವ ಬಟ್ಟೆ ಧರಿಸಿಕೊಂಡು ಹೋಗಿರುತ್ತಾರೆ ಅನ್ನುವುದು ನಿಖರವಾಗಿ ಗೊತ್ತಿಲ್ಲ ಈ ಪ್ರಕಾರ ಚಹರೆ ಪಟ್ಟಿ ಇರುವ ಸೈಯಿದಾ ಮತ್ತು ಮಗಳಾದ ಇರಮನಾಜ್ ಇವರನ್ನು ಇಲ್ಲಿಯವರೆಗೆ ಅಲ್ಲಿ ಇಲ್ಲಿ ಹುಡುಕಾಡಿ ಬಂದು ಪಿರ್ಯಾದಿ ಕೊಡಲು ತಡವಾಗಿರುತ್ತದೆ. ಕಾರಣ ನನ್ನ ಹೆಂಡತಿ ಮತ್ತು ಮಗಳಿಗೆ ತಪಾಸಣೆ ಮಾಡಿಕೊಡಬೇಕಾಗಿ ವಿನಂತಿ ಅಂತಾ ವಗೈರೆ ಪಿರ್ಯಾಧಿಯಲ್ಲಿ ನಮೂದ ಅದೆ ಈ ಬಗ್ಗೆ ಇರ್ಫಾನ ತಂ॥ ಅಬ್ದುಲ ಸತ್ತಾರ ಅಲಾಸ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 07-06-2021 ರಂದು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಗೋಳಗುಮ್ಮಟ ಪೊಲೀಸ ಠಾಣೆ ಗುನ್ನಾ. ನಂ: 63/2021 ಕಲಂ 188. 269 ಐಪಿಸಿ ಹಾಗೂ 87 ಕೆ.ಪಿ.ಆ್ಯಕ್ಟ-1963**

ದಿನಾಂಕ 07.06.2021 ರಂದು 18-40 ಗಂಟೆಯ ಸುಮಾರಿಗೆ ಇದರಲ್ಲಿ ಆರೋಪಿತರಾದ 1) ರಮೇಶ ದೇವಪ್ಪ ಅವಟಿ, ಸಾ: ಎಸ್.ಬಿ.ಐ ಕಾಲನಿ, ವಿಜಯಪುರ 2) ರಮೇಶ ತಂ: ಶಿವಪ್ಪ ರೆಡ್ಡಿ, ಸಾ: ಎಸ್.ಬಿ.ಐ ಕಾಲನಿ, ವಿಜಯಪುರ, 3) ಈರಣ್ಣ ತಂ: ರೇವಪ್ಪ ಅವಟಿ, ಸಾ: ಎಸ್.ಬಿ.ಐ ಕಾಲನಿ, ವಿಜಯಪುರ, 4) ಮಂಜುನಾಥ ತಂ: ಸೂರ್ಯ ಶೆಟ್ಟಿ, ಸಾ: ಜೈ ಕರ್ನಾಟಕ ಕಾಲನಿ ವಿಜಯಪುರ ಇವರು ಗುಂಪಾಗಿ ಕುಳಿತುಕೊಂಡು ಸಧ್ಯಕ್ಕೆ ಕೋವಿಡ್-19 ದ ಎರಡನೇ ಅಲೆಯು ವ್ಯಾಪಕವಾಗಿ ಹರಡುತ್ತಿದ್ದರಿಂದ ಮಾನ್ಯ ಕರ್ನಾಟಕ ಸರಕಾರವು ಯಾವುದೇ ಅಗತ್ಯ ವಸ್ತುಗಳ ಅವಶ್ಯಕತೆ ಇಲ್ಲದೆ ಅನಾವಶ್ಯಕವಾಗಿ ಜನರು ಮನೆಯಿಂದ ಹೊರಗೆ ಬರದಂತೆ ಮತ್ತು ಜನಸಂಧಣಿ ಮಾಡದಂತೆ, ಗುಂಪಾಗಿ ಕೂಡದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಲಾಕ್‌ಡೌನ ಮಾಡಿದ್ದರೂ ಸಹ ಮಾನ್ಯ ಸರಕಾರದ ಆದೇಶವನ್ನು ಉಲ್ಲಂಘಿಸಿ, ಸದರಿ ಕೊರೋನಾ ವೈರಸ್ ಎಂಬ ಮಾರಕ ಕಾಯಿಲೆ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ ಅಂತಾ ತಿಳಿದು-ತಿಳಿದು ನಿರ್ಲಕ್ಷತನ ಪ್ರದರ್ಶಿಸಿ, ತಮ್ಮ-ತಮ್ಮ ಪಾಯಿದೆಗೋಸ್ಕರ ಇಸ್ಪೀಟು ಎಲೆಗಳ ಸಹಾಯದಿಂದ ಹಣ ಪಣಕ್ಕೆ ಕಟ್ಟಿ ಅಂದರ ಬಾಹರ ಅನ್ನುವ ಮನ್ನಾ-ಜೂಜಾಟ ಆಡುತ್ತಿದ್ದಾಗ ಸಲಕರಣೆಗಳ ಸಮೇತ ಸಿಕ್ಕವರ ಮೇಲೆ ಕಲಂ. 188, 269 ಐಪಿಸಿ-1860 ಹಾಗೂ 87 ಕರ್ನಾಟಕ ಪೊಲೀಸ್ ಕಾಯ್ದೆ-1963 ಅಡಿಯಲ್ಲಿ ಪಿಎಸ್ಐ ರವರು ಸ.ತ.ಪಿರ್ಯಾದಿ ನೀಡಿದ್ದು ಇರುತ್ತದೆ. 1] ರೋಖ ಹಣ: 1520/- 2] ಇಸ್ಪೇಟ ಎಲೆಗಳು-52 ಈ ಬಗ್ಗೆ ರಾಜೇಶ್ ಎಸ್. ಲಮಾಣಿ, ಪಿ.ಎಸ್.ಐ (ಕಾ&ಸು) ಗೋಲಗುಮ್ಮಜ್ ಪೊಲೀಸ್ ಠಾಣೆ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 07-06-2021 ರಂದು ಗೋಳಗುಮ್ಮಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನಾ.ನಂ:102/2021 ಕಲಂ:ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳು 42,[3][1]1994 ಮತ್ತು 379 ಐ ಪಿ ಸಿ**

ದಿನಾಂಕ 07.06.2021 ರಂದು 18-40 ಗಂಟೆಯ ಸುಮಾರಿಗೆ ಇದರಲ್ಲಿ ಆರೋಪಿತರಾದ 1] ಹುಸೇನ ಮೌಲಾಸಾಬ ಕಾಣೆ ಸಾ: ಅಗರಖೇಡ 2] ಮಹಾದೇವ ಶಿವರಾಯ ಕವಲಗಿ ಸಾ: ಅಗರಖೇಡ 3] ಶರಣಬಸಪ್ಪ ಹೊನ್ನಪ್ಪ ಕವಲಗಿ ಸಾ: ಅಗರಖೇಡ 4] ರಶೀದ ಮೌಲಾಸಾಬ ಕಾಣೆ ಸಾ: ಅಗರಖೇಡ 5] ಗೌಸ ಸುಲ್ತಾನ ಕೊರಬು ಸಾ: ಅಗರಖೇಡ ಇವರು ತಮ್ಮ ಅಗರಖೇಡ ಜಮೀನ ಸರ್ವೆ ನಂ:420/1ಬಿ ನೇದ್ದರಲ್ಲಿ 9315 ಮೆಟ್ರಿಕ್ ಟನ್ನ ಮಣ್ಣು ರ ಹೀಗೆ ಒಟ್ಟು 69,105 ಮೆಟ್ರಿಕ್ ಟನ್ನ ಮಣ್ಣು [ಬ್ರಿಕ್ಸ್ & ಟೈಲ್ಸ್ ಕ್ಲೇ] ಇವರು ಸಂಬಂಧಪಟ್ಟ ಇಲಾಖೆಯಿಂದ ಅನುಮತಿಯನ್ನು ಪಡೆದುಕೊಳ್ಳದೇ ಅನಧೀಕೃತವಾಗಿ ತಮ್ಮ ತಮ್ಮ ಜಮೀನುಗಳ ಸರ್ವೇ ನಂಬರಗಳಲ್ಲಿ ಅಕ್ರಮವಾಗಿ ಮಣ್ಣು ತೆಗೆದು ಕಳ್ಳತನದಿಂದ ಗಣಿಗಾರಿಕೆ ವ ಸಾಗಾಣಿಕೆ ಮಾಡಿರುತ್ತಾರೆ. ಅಂತಾ ವಗೈರೆ ನೀಡಿದ ಸರಕಾರ ತರ್ಪೆ ಫಿರ್ಯಾದವನ್ನು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯ ಗುನ್ನೆ ನಂಬರ 102/2021 ಕಲಂ: ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳು 42,[3][1] 1994 ನೇದ್ದಕ್ಕೆ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಕೈಕೊಂಡಿದ್ದು ಇರುತ್ತದೆ. ಈ ಬಗ್ಗೆ ಸುಭಾಷ್‌ಚಂದ್ರ ಎಸ್ ಬೂ ವಿಜ್ಞಾನ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 07-06-2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.